# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1007 |
| ಸದಸ್ಯರ ಹೆಸರು | ಶ್ರೀ ಮಧು ಜಿ ಮಾದೇಗೌಡ |
| ಉತ್ತರಿಸುವ ದಿನಾಂಕ | 20.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ರಾಜ್ಯದ ಭಕ್ತರ ಅನುಕೂಲಕ್ಕಾಗಿ ಹೊರ ರಾಜ್ಯಗಳ ಯಾವ ಯಾವ ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು/ಪ್ರವಾಸಿ ಭವನಗಳನ್ನು ನಿರ್ಮಿಸಲಾಗಿದೆ;(ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ರಾಜ್ಯದ ಭಕ್ತರ ಅನುಕೂಲಕ್ಕಾಗಿ ಹೊರ ರಾಜ್ಯಗಳ ಈ ಕೆಳಕಂಡ ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು / ಕರ್ನಾಟಕ ಭವನಗಳನ್ನು ನಿರ್ಮಿಸಲಾಗಿದೆ.<br><br>ಕ್ರ.ಸಂ. \| ರಾಜ್ಯ \| ಶ್ರೀಕ್ಷೇತ್ರ<br>1 \| ಆಂಧ್ರಪ್ರದೇಶ \| ತಿರುಮಲ, ತಿರುಚಾನೂರು, ಮಂತ್ರಾಲಯ, ಶ್ರೀಶೈಲಂ<br>2 \| ಮಹಾರಾಷ್ಟ್ರ \| ತುಳಜಾಪುರ, ಗುಡ್ಡಾಪುರ<br>3 \| ಉತ್ತರಪ್ರದೇಶ \| ವಾರಣಾಸಿ |
| ಆ) | ಕರ್ನಾಟಕ ಸರ್ಕಾರವು ಬೇರೆ ಯಾವ ರಾಜ್ಯಗಳ ಧಾರ್ಮಿಕ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ಛತ್ರಗಳು/ ಪ್ರವಾಸಿ ಭವನಗಳನ್ನು ನಿರ್ಮಿಸುತ್ತಿದೆ ಅಥವಾ ನಿರ್ಮಿಸಲು ಉದ್ದೇಶಿಸಿದೆ; ಇದಕ್ಕಾಗಿ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ: (ಸಂಪೂರ್ಣ ವಿವರ ನೀಡುವುದು) | ಮಹಾರಾಷ್ಟ್ರ ರಾಜ್ಯ ಶ್ರೀಕ್ಷೇತ್ರ ಪಂಡರಾಪುರದಲ್ಲಿ ಕರ್ನಾಟಕ ರಾಜ್ಯ ಛತ್ರ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.<br><br>ಪಂಡರಾಪುರದಲ್ಲಿ ಹೊಸದಾಗಿ ಅತಿಥಿ ಗೃಹ ನಿರ್ಮಾಣ ಮಾಡಲು ಸರ್ಕಾರದಿಂದ ಕೆಳಕಂಡಂತೆ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು ಜಿಲ್ಲಾಧಿಕಾರಿಗಳು/ನೋಡಲ್ ಅಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ.<br><br>ಕ್ರ. ಸಂ. \| ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ \| ಮೊತ್ತ (ರೂ.ಲಕ್ಷಗಳಲ್ಲಿ)<br>1 \| ಕಂಇ 139 ಮುಅಬಿ 2022, ದಿನಾಂಕ:13.07.2022 \| 750.-00<br>2 \| ಕಂಇ 25ಮುಅಬಿ 2022 ದಿನಾಂಕ:23.07.2022 \| 300-00<br> \| ಒಟ್ಟು \| 1050-00<br><br>ಕರ್ನಾಟಕ ಭವನ ನಿರ್ಮಾಣ ಮಾಡಲು ನಿರಾಕ್ಷೇಪಣಾ ಪತ್ರ ನೀಡಿ ಕಟ್ಟಡ ನಿರ್ಮಾಣಕ್ಕಾಗಿ ಅನುಮತಿ ನೀಡುವಂತೆ ಹಾಗೂ ಈ ಕಾಮಗಾರಿ ನಿರ್ವಹಿಸಲು ಆಡಳಿತಾತ್ಮಕ ಬೆಂಬಲ ನೀಡುವಂತೆ ಕೋರಿ ಕಲೆಕ್ಟರ್, ಸೊಲ್ಲಾಪುರ ಜಿಲ್ಲೆ ಇವರಿಗೆ ದಿನಾಂಕ:05.02.2025 ರಂದು ಪತ್ರ ಬರೆಯಲಾಗಿದ್ದು, ಕರ್ನಾಟಕ ಭವನ ನಿರ್ಮಾಣ ಮಾಡಲು ನಿರಾಕ್ಷೇಪಣಾ ಪತ್ರ ನಿರೀಕ್ಷಿಸಲಾಗುತ್ತಿದೆ. |
| ಇ) | ಹೊರ ರಾಜ್ಯಗಳಲ್ಲಿರುವ ರಾಜ್ಯ ಛತ್ರಗಳ ನಿರ್ವಹಣೆ ಮತ್ತು ಇನ್ನಿತರ ಮೂಲಸೌಕರ್ಯ ಕಲ್ಪಿಸುವ ಕೆಲಸಗಳಿಗೆ ಕಳೆದ 03 ವರ್ಷಗಳಲ್ಲಿ ಒದಗಿಸಲಾಗಿರುವ ಅನುದಾನ | ತಿರುಮಲ ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ತಿರುಮಲ ಕರ್ನಾಟಕ ರಾಜ್ಯ ಛತ್ರದ ದೈನಂದಿನ ನಿರ್ವಹಣೆಗಾಗಿ ಮತ್ತು ಹೊರ ರಾಜ್ಯದ ಈ ಕೆಳಕಂಡ ರಾಜ್ಯ ಛತ್ರಗಳ ಮೂಲಸೌಕರ್ಯ ಅಭಿವೃದ್ಧಿ/ನಿರ್ಮಾಣ ವೆಚ್ಚಗಳಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ. |

| ಪ್ರಶ್ನೆ | ಉತ್ತರ | | | | | |
|---|---|---|---|---|---|---|
| ಎಷ್ಟು: (ವರ್ಷವಾರು ಮಾಹಿತಿ ನೀಡುವುದು) | ಹೊರ ರಾಜ್ಯಛತ್ರ | ವಿವರ | 2022-23 | 2023-24 | 2024-25 | ಷರಾ |
| | | | (ರೂ.ಲಕ್ಷಗಳಲ್ಲಿ) | | | |
| | ಆಂದ್ರ ಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರ | ಮೂಲ ಸೌಕರ್ಯ (ಅಭಿವೃದ್ಧಿ/ ನಿರ್ಮಾಣ) | - | - | - | - |
| | | ನಿರ್ವಹಣೆ | 100-00 | 200-00 | 200-00 | - |
| | ಆಂದ್ರ ಪ್ರದೇಶ ಶ್ರೀ ಶೈಲಂ ಕರ್ನಾಟಕ ರಾಜ್ಯ ಛತ್ರ | ಮೂಲ – ಸೌಕರ್ಯ (ಅಭಿವೃದ್ಧಿ/ ನಿರ್ಮಾಣ) | 3375.00 | - | - | - |
| | | ನಿರ್ವಹಣೆ | - | - | - | - |
| | ಆಂದ್ರ ಪ್ರದೇಶ ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರ | ಮೂಲ ಸೌಕರ್ಯ (ಅಭಿವೃದ್ಧಿ/ ನಿರ್ಮಾಣ) | 400.00 | - | - | - |
| | | ನಿರ್ವಹಣೆ | - | - | - | - |
| | ಉತ್ತರ ಪ್ರದೇಶ, ವಾರಣಾಸಿ ಕರ್ನಾಟಕ ರಾಜ್ಯ ಛತ್ರ | ಮೂಲ ಸೌಕರ್ಯ (ಅಭಿವೃದ್ಧಿ/ ನಿರ್ಮಾಣ) | - | - | 500-00 | ವಾರಣಾಸಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶ್ರೀ ಹರೀಶ್ಚಂದ್ರ ಘಾಟ್ (ಸ್ಮಶಾನ) ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಕರ್ನಾಟ ರಾಜ್ಯ ಛತ್ರದ ತಡೆಗೋಡೆಗೆ ಹಾನಿಯಾಗಿ ಸಂಪೂರ್ಣವಾಗಿ ಕುಸಿದು ಹೋಗಿರುತ್ತದೆ. ಅಲ್ಲದೇ ಸುಮಾರು ಒಂದು ಶತಮಾನಗಳಷ್ಟು ಹಳೆಯದಾದ (96 ವರ್ಷಗಳು) ಛತ್ರದ ಕಟ್ಟಡದ ಒಂದು ಭಾಗವು ಸಹ ಕುಸಿದು ಹೋಗಿರುತ್ತದೆ ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಪರಿಶೀಲಿಸಿ, ಸಂಪೂರ್ಣ ಛತ್ರದ ಕಟ್ಟಡವನ್ನು ತೆರವುಗೊಳಿಸಿ, ಹೊಸದಾಗಿ ನಿರ್ಮಾಣ ಮಾಡಬೇಕಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. |
| | | ನಿರ್ವಹಣೆ | - | - | - | - |
| | ಮಹಾರಾಷ್ಟ್ರ, ತುಳಜಾಪುರ, ಕರ್ನಾಟಕ ರಾಜ್ಯ ಛತ್ರ | ಮೂಲ ಸೌಕರ್ಯ (ಅಭಿವೃದ್ಧಿ/ ನಿರ್ಮಾಣ) | - | - | - | - |
| | | ನಿರ್ವಹಣೆ | - | - | - | - |

| ಪ್ರಶ್ನೆ | ಉತ್ತರ |
|---|---|

| | | | | | |
|---|---|---|---|---|---|
| ಮಹಾರಾಷ್ಟ್ರ, ಗುಡ್ಡಾಪುರ, ಕರ್ನಾಟಕ ಭವನ | ಮೂಲ ಸೌಕರ್ಯ (ಅಭಿವೃದ್ಧಿ/ ನಿರ್ಮಾಣ) | 500.00 | - | - | - |
| | ನಿರ್ವಹಣೆ | - | - | - | - |
| **ಒಟ್ಟು** | | **4375.00** | **200.00** | **700.00** | - |

ಈ) ಇಲ್ಲಿನ ಕರ್ನಾಟಕ ರಾಜ್ಯ ಛತ್ರಗಳು/ ಪ್ರವಾಸಿ ಭವನಗಳಲ್ಲಿ ರಾಜ್ಯದ ಭಕ್ತರು ಉಳಿದುಕೊಳ್ಳಲು ಅಥವಾ ವಾಸ್ತವ್ಯಕ್ಕೆ ಕೊಠಡಿಗಳನ್ನು ಮುಂಚಿತವಾಗಿ ಕಾಯ್ದಿರಿಸಲು ಅನುಸರಿಸಬೇಕಾದ ಕ್ರಮಗಳೇನು; ಯಾರನ್ನು ಸಂಪರ್ಕಿಸಬೇಕು? (ವಿಳಾಸ, ಸಂಪರ್ಕ ಸಂಖ್ಯೆ, ಇ-ಮೇಲ್ ವಿಳಾಸವನ್ನು ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು)

ಹೊರ ರಾಜ್ಯಗಳಲ್ಲಿರುವ ತಿರುಮಲ ಮತ್ತು ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳ ಕೊಠಡಿಗಳನ್ನು ಯಾತ್ರಾರ್ಥಿಗಳು ಮುಂಗಡವಾಗಿ ಆನ್‌ಲೈನ್ ನಲ್ಲಿ **karnatakatemplesaccommodattion.com** website ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ತಿರುಮಲದ ಕರ್ನಾಟಕ ರಾಜ್ಯ ಛತ್ರದ **ಐಹೊಳೆ** ಬ್ಲಾಕ್ ನಲ್ಲಿರುವ 132 ಕೊಠಡಿಗಳ ಪೈಕಿ 90 ಕೊಠಡಿಗಳನ್ನು ಮತ್ತು **ಹಂಪಿ** ಬ್ಲಾಕ್‌ನಲ್ಲಿ ಲಭ್ಯವಿರುವ ಒಟ್ಟು 110 ಕೊಠಡಿಗಳಲ್ಲಿ 71 ಕೊಠಡಿಗಳ(AC ಕೊಠಡಿಗಳು)ಪೈಕಿ 50 ಕೊಠಡಿಗಳನ್ನು ಮತ್ತು 39 ಕೊಠಡಿಗಳ(AC Suits)ಪೈಕಿ 15 ಕೊಠಡಿಗಳನ್ನು ಭಕ್ತಾದಿಗಳಿಗೆ ಮುಂಗಡವಾಗಿ ಆನ್ ಲೈನ್ ಮೂಲಕ ಕಾಯ್ದಿರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದರೆ, ವಾರಣಾಸಿ ಕರ್ನಾಟಕ ರಾಜ್ಯ ಛತ್ರದ ಹಳೆಯ ವಸತಿ ಸಂಕೀರ್ಣದ ಉತ್ತರದಲ್ಲಿನ ಒಂದು ಭಾಗ ಹಾಗೂ ಹೊಂದಿಕೊಡಂತೆ ಇದ್ದ ಹಳೆಯ ಕಾಂಪೌಂಡ್ ದಿನಾಂಕ:21.09.2024 ರಂದು ಮದ್ಯಾಹ್ನ ದಿಢೀರ್ ಕುಸಿದು ಗಂಗಾನದಿಗೆ ಬಿದ್ದಿರುವ ಹಿನ್ನಲೆಯಲ್ಲಿ ಸದರಿ ದಿನದಿಂದಲೇ ಬುಕ್ಕಿಂಗ್ ಸ್ಥಗಿತಗೊಂಡಿರುತ್ತದೆ.

ಹೊರ ರಾಜ್ಯಗಳಲ್ಲಿರುವ ಕರ್ನಾಟಕ ಛತ್ರ/ಭವನಗಳಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳ/ಸಚಿವರುಗಳ/ಶಾಸಕರುಗಳ ಮತ್ತು ಇತರೆ ಉನ್ನತ ಮಟ್ಟದ ಅಧಿಕಾರಿಗಳ ಕಛೇರಿಗಳಿಂದ ನೀಡುವ ಶಿಫಾರಸ್ಸು ಪತ್ರಗಳಿಗೆ ಆದ್ಯತೆಯನ್ನು ನೀಡಿ, ಕೊಠಡಿಗಳ ಲಭ್ಯತೆ ಗನುಗುಣವಾಗಿ ಹಂಚಿಕೆ ಮಾಡಲಾಗುತ್ತಿರುತ್ತದೆ.

ಛತ್ರಗಳ ಆಡಳಿತ ಕಛೇರಿಯ ವಿವರವು ಕೆಳಕಂಡಂತಿರುತ್ತದೆ.

| ಕ್ರ. ಸಂ | ಹೊರ ರಾಜ್ಯ ಛತ್ರಗಳ ವಿವರ | ವಿಶೇಷಾಧಿಕಾರಿ/ ವ್ಯವಸ್ಥಾಪಕರ ವಿವರ (ಶ್ರೀಯುತ) | ದೂರವಾಣಿ/ ಮೊಬೈಲ್ ಸಂಖ್ಯೆ | ಇ-ಮೇಲ್ ವಿಳಾಸ |
|---|---|---|---|---|
| 1. | ವಿಶೇಷಾಧಿಕಾರಿ ಕರ್ನಾಟಕ ರಾಜ್ಯ ಛತ್ರ, ತಿರುಮಲ, ಆಂಧ್ರಪ್ರದೇಶ | ಕೋದಂಡ್‌ರಾಮ್ | 9448513398 | Sokpstirumala@gmail.com |
| 2. | ವಿಶೇಷಾಧಿಕಾರಿ ಕರ್ನಾಟಕ ರಾಜ್ಯ ಛತ್ರ, ತಿರುಚಾನೂರು, ಆಂಧ್ರಪ್ರದೇಶ | | | |
| 3. | ಪತ್ರಾಂಕಿತ ವ್ಯವಸ್ಥಾಪಕರು ಕರ್ನಾಟಕ ರಾಜ್ಯಛತ್ರ, ಮಂತ್ರಾಲಯ, ಆಂಧ್ರಪ್ರದೇಶ | ಆಂಜನೇಯಲು | 9739679580 | kscm.manthralya@gmail.com |
| 4. | ವ್ಯವಸ್ಥಾಪಕರು | | | kscsrisailam |

| ಪ್ರಶ್ನೆ | | ಉತ್ತರ | | | | |
|---|---|---|---|---|---|---|
| | | | ಕರ್ನಾಟಕ ರಾಜ್ಯ ಛತ್ರ, ಶ್ರೀಶೈಲಂ, ನಂದ್ಯಾಲ ಜಿಲ್ಲೆ ಆಂಧ್ರಪ್ರದೇಶ | | | @gmail.com- |
| | | 5. | ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ, ಹನುಮಾನ್ ಘಾಟ್ವಾರಣಾಸಿ, ಉತ್ತರಪ್ರದೇಶ | ಕೃಷ್ಣ ಮೂರ್ತಿ | 9491409777 | managerkscvarnasi @gmail.com |
| | | 6. | ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಛತ್ರ, ಘಾಟಶೀಳ ರೋಡ್ ತುಳಜಾಪುರ, ಮಹಾರಾಷ್ಟ್ರ | ಮಹಾಂತೇಶ್ ನೀವರ್ಗಿ | 8970996273 | - |

ಸಂಖ್ಯೆ: ಕಂಇ 174 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು